# ಸ್ವಾಮಿ ವಿವೇಕಾನಂದರು ಮತ್ತು ಜಾಗತೀಕರಣ

ಪ್ರೊ. ಎನ್.ಕೃಷ್ಣಸ್ವಾಮಿ

ಇಂದಿನ ಜಾಗತೀಕರಣದ ಹಿನ್ನೆಲೆಯಲ್ಲಿ ವಿವೇಕಾನಂದರ ಜೀವನಸಂದೇಶವನ್ನು ವಿಶ್ಲೇಷಿಸಿರುವ ಪ್ರೊ.ಎನ್.ಕೃಷ್ಣಸ್ವಾಮಿಯವರು ಬೆಂಗಳೂರಿನಲ್ಲಿರುವ ಸ್ವಾಮಿ ವಿವೇಕಾನಂದ ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿಗಳಾಗಿರುವರು ಮತ್ತು ಬೆಂಗಳೂರು ರಾಮಕೃಷ್ಣ ಮಠದ ನಿಕಟಭಕ್ತರಾಗಿರುವರು.

ಹಿಂದೆ ಒಂದು ಕಾಲ ಇತ್ತು. ಆಗ ನಮ್ಮ ಗ್ರಾಮವೇ ನಮ್ಮ ಜಗತ್ತು. ಈಗಲಾದರೋ ಜಗತ್ತೇ ಒಂದು ಗ್ರಾಮ ಆಗಿದೆ ಎಂದು ಹೇಳುತ್ತಾರೆ. ಇದಕ್ಕೆ ಕಾರಣ ಸಂಪರ್ಕ ಸಾಧನೆಗಳು ಉತ್ತಮಗೊಂಡಿರುವುದೇ ಆಗಿದೆ.

## ವಾಣಿಜ್ಯ ಜಾಗತೀಕರಣ

ಈಗ ಸುಮಾರು ಕಾಲು ಶತಮಾನದಲ್ಲಿ ವಿಶ್ವವಾಣಿಜ್ಯ ಸಂಸ್ಥೆ (W.T.O) ಅಸ್ತಿತ್ವಕ್ಕೆ ಬಂದು ದೇಶ ದೇಶಗಳ ನಡುವೆ ಹೆಚ್ಚಿನ ವಾಣಿಜ್ಯ ವ್ಯವಹಾರ ಮುಕ್ತವಾಗಿ, ಹೆಚ್ಚಿನ ಪ್ರಮಾಣದಲ್ಲಿ ನಡೆಯಬೇಕೆಂಬ ಉದ್ದೇಶದಿಂದ ಅನೇಕ ಸುಧಾರಣೆಗಳನ್ನು ಪ್ರಪಂಚದಲ್ಲೆಲ್ಲ ಜಾರಿಗೊಳಿಸುತ್ತಿದೆ. ಸುಂಕಗಳನ್ನು ಕಡಿಮೆ ಮಾಡಿ,ಕಾಪಿರೈಟ್-ಟ್ರೇಡ್‌ಮಾರ್ಕ್‌ಗಳನ್ನು ಎಲ್ಲರೂ ಮಾನ್ಯ ಮಾಡಿ, ಸಬ್ಸಿಡಿ ಅಥವಾ ಸಹಾಯ ಧನಗಳನ್ನು ಮೊಟಕು ಮಾಡಿ, ಸರ್ಕಾರಿ ನಿರ್ಬಂಧಗಳನ್ನು ಸಡಿಲಿಸಿ ಜಗತ್ತಿನಲ್ಲಿ ಎಲ್ಲ ರಾಷ್ಟ್ರಗಳ ಸರಕು ಮುಕ್ತವಾಗಿ ಸಂಚರಿಸುವಂತೆ ಆಗಬೇಕೆಂಬುದು ಉದ್ದೇಶ. ಇದು ವಾಣಿಜ್ಯ ಕ್ಷೇತ್ರದ ಜಾಗತೀಕರಣ. ಭಾರತ, ಚೀನಗಳೂ ಈ ಒಪ್ಪಂದಕ್ಕೆ ಒಳಗಾಗಿ ಅದರ ಲಾಭ, ನಷ್ಟಗಳನ್ನು ಹಂಚಿಕೊಳ್ಳುತ್ತಿವೆ. ಅರ್ಜೆಂಟಿನದಂತಹ ಕೆಲವು ರಾಷ್ಟ್ರಗಳು ಈ ಸುಧಾರಣೆಗಳಿಂದಾಗಿ ಸರ್ವನಾಶವನ್ನೇ ಅನುಭವಿಸಿವೆ. ಒಂದು ಮದುವೆಯಲ್ಲಿ

**ಕನ್ಯಾ ವರಯತೇ ರೂಪಂ, ಮಾತಾ ವಿತ್ತಂ ಪಿತಾ ಶ್ರುತಮ್ |**
**ಬಾಂಧವಾಃ ಶೀಲಮಿಚ್ಛಂತಿ ಮೃಷ್ಟಾನ್ನಮಿತರೇ ಜನಾಃ ||**

"ವಧುವು ವರನಲ್ಲಿ ರೂಪವನ್ನೂ ಅವಳ ತಾಯಿ ಹಣವನ್ನೂ ತಂದೆ ವಿದ್ಯೆಯನ್ನೂ ಬಂಧುಗಳು ಶೀಲವನ್ನೂ ನಿರೀಕ್ಷಿಸಿದರೆ ಇತರ ಜನರು ಒಳ್ಳೆಯ ಊಟ ಸಿಗುವುದೆಂದು ಆಶಿಸುತ್ತಾರೆ." ಹಾಗೆಯೇ ವಾಣಿಜ್ಯ ಜಾಗತೀಕರಣದಿಂದ ಮುಂದುವರಿದ ರಾಷ್ಟ್ರಗಳು ಪ್ರಪಂಚಾದ್ಯಂತ ತಮ್ಮ ಸಿದ್ಧವಸ್ತುಗಳಿಗೆ ವಿಶಾಲವಾದ ಮಾರುಕಟ್ಟೆಯನ್ನು ನಿರೀಕ್ಷಿಸಿದರೆ ಅಭಿವೃದ್ಧಿಶೀಲ ರಾಷ್ಟ್ರಗಳು ಹೆಚ್ಚಿನ ಬಂಡವಾಳ ಹೂಡಿಕೆ, ಹೆಚ್ಚಿನ ನಿರ್ಯಾತವನ್ನು ಪಡೆಯಲಿಚ್ಛಿಸುತ್ತಿವೆ. ಪರಿಣಾಮ ನಿರೀಕ್ಷಿಸಿದಷ್ಟು ಫಲಕಾರಿಯಾಗಿಲ್ಲ.



ಡಾ.ಸಿ.ಇ.ಎಮ್. ಜೋಡ್ ಸೂಚಿಸಿದ "ಪೂರ್ವದಿಂದ ಪ್ರತಿಧಾಳಿ"ಯನ್ನು ಮೊದಲು ಹುಟ್ಟು ಹಾಕಿದವರು ವಿವೇಕಾನಂದರು ಎಂದು ಜಗತ್ತಿನ ಇತಿಹಾಸದಲ್ಲಿ ಅವರ ಸ್ಮೃತಿ ಉಳಿಯುವುದು.

– *ಎ.ಎಲ್. ಬಾಷಮ್*

ಹಾಗಾದರೆ ಎಲ್ಲ ರಾಷ್ಟ್ರಗಳೂ ಏಕೆ ಈ ಪ್ರಪಂಚ ವಾಣಿಜ್ಯ ಒಪ್ಪಂದಕ್ಕೆ ರುಜುಹಾಕುತ್ತಿವೆ? ಒಂದು ಹೆದರಿಕೆ ಇದೆ. ಹಾಗೆ ಮಾಡದಿದ್ದರೆ ವಿಶ್ವ ಬ್ಯಾಂಕ್, ಅಂತರ ರಾಷ್ಟ್ರೀಯ ಆರ್ಥಿಕ ಫಂಡ್ ಮೊದಲಾದ ಸಂಸ್ಥೆಗಳ ಸಾಲ ದೊರೆಯುವುದಿಲ್ಲ ಎಂಬ ದಿಗಿಲು ಇದೆ. ಕಷ್ಟವಾದರೂ ಒಂದು ಶಿಸ್ತನ್ನು ಪಾಲಿಸಬೇಕಾಗಿ ಬಂದಿದೆ, ರಾಷ್ಟ್ರೀಯ ಬಜೆಟ್‌ನಲ್ಲಿ ಖೋತಾವನ್ನು ಕಡಿಮೆ ಮಾಡಲು ಯತ್ನಿಸಬೇಕಾಗಿದೆ. ಇನ್ನೊಂದು ಕಡೆ ಬಂಡವಾಳ ಹೂಡಿಕೆಯ ಆಸೆ ಆಮಿಷವೂ ಕೆಲಸ ಮಾಡುತ್ತಿದೆ. ಅಭಿವೃದ್ಧಿಯ ವೇಗ ಹೆಚ್ಚಾಗುವುದೆಂಬ ನಿರೀಕ್ಷೆ ಇದೆ. ಒಂದೊಂದು ಕ್ಷೇತ್ರದಲ್ಲಿ—ಐ.ಟಿ. ಅಥವಾ ಇನ್ನೊಂದರಲ್ಲಿ—ಅದ್ಭುತವಾದ ಮುನ್ನೋಟ ಆಶಾಭಾವನೆಗೆ ಎಡೆಮಾಡಿದೆ. ಇನ್ನೊಂದು ಕಡೆ ರೈತ ಸಮಾಜ ಪಡಬಾರದ ಕಷ್ಟಗಳನ್ನೆದುರಿಸುತ್ತಿದೆ. ಅನೇಕ ಕೈಗಾರಿಕೆಗಳು ಹೊಸ ನೀತಿಯಿಂದಾಗಿ ಮುಚ್ಚಿಹೋಗಿ ನಿರುದ್ಯೋಗ ಹೆಚ್ಚುತ್ತಿದೆ. ಕೆಲವರ ಮುನ್ನಡೆ, ಹಲವರ ಪತನ. ಹೀಗೆ ವಾಣಿಜ್ಯ ಕ್ಷೇತ್ರದ ಜಾಗತೀಕರಣ ಮಿಶ್ರಫಲ ಕೊಡುತ್ತಿದೆ.

## ಸ್ವಾಮಿ ವಿವೇಕಾನಂದರ ಜಾಗತೀಕರಣ.

ಸ್ವಾಮಿ ವಿವೇಕಾನಂದರು ಒಂದು ಕಡೆ ಭಾರತದ ಜನರ ಉದ್ಧಾರದ ಗುರಿಯನ್ನಿಟ್ಟುಕೊಂಡರೆ ಇನ್ನೊಂದು ಕಡೆ ಇಡೀ ಜಗತ್ತಿನಲ್ಲಿ ಜೀವದಾಯಕವಾದ ಹೊಸ ಭಾವನೆಗಳನ್ನು, ಹೊಸ

ಗುರಿಗಳನ್ನು, ನಿರ್ಮಿಸುವುದರ ಮೂಲಕ ಒಂದು ನವ ವೇದಾಂತದ ಪರಿಕಲ್ಪನೆಯ ಜಗತ್ತಿನ ನಿರ್ಮಾಣಕ್ಕಾಗಿ ಶ್ರಮಿಸುವುದನ್ನು ಕಾಣುತ್ತೇವೆ. ತಮ್ಮ ಗುರು ಶ್ರೀರಾಮಕೃಷ್ಣರ ಸರ್ವಧರ್ಮ ಸಮನ್ವಯದ ಆದರ್ಶವನ್ನು ಅವರು ವ್ಯಾಪಕವಾಗುವಂತೆ ಮಾಡಲು ಶ್ರಮಿಸಿದರು. ಇದಕ್ಕಾಗಿ ಅವರು ಭಾರತದ ಉದ್ದಗಲವನ್ನೆಲ್ಲ ಪರಿಕ್ರಮಿಸಿದರು, ಜಗತ್ತಿನಲ್ಲೆಲ್ಲ ಓಡಾಡಿದರು.

ಸ್ವಾಮೀಜಿ ಒಂದು ಪತ್ರದಲ್ಲಿ ಬರೆಯುತ್ತಾರೆ : "ಅದಕ್ಕೇ ನಾವು ಪ್ರಯಾಣ ಮಾಡಬೇಕೆನ್ನುವುದು. ದೂರದೇಶಗಳಿಗೆ ಹೋಗಬೇಕು. ಅಲ್ಲಿ ಸಾಮಾಜಿಕ ಯಂತ್ರ ಹೇಗೆ ಕೆಲಸ ಮಾಡುತ್ತಿದೆ ಎನ್ನುವುದನ್ನು ನೋಡಬೇಕು. ನಾವು ಇನ್ನೊಮ್ಮೆ ಒಂದು ರಾಷ್ಟ್ರವಾಗಬೇಕಾದರೆ ಬೇರೆ ದೇಶದವರ ಮನಸ್ಸಿನಲ್ಲಿ ಏನಾಗುತ್ತಿದೆಯೆಂದು ತಿಳಿದುಕೊಳ್ಳಲು ಅವರೊಡನೆ ಸ್ವತಂತ್ರವಾದ ಸರಳವಾದ ಸಂಬಂಧವನ್ನು ಕಲ್ಪಿಸಿಕೊಳ್ಳಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಮತ್ತೊಬ್ಬರನ್ನು ಹಿಂಸಿಸುವುದನ್ನು ಬಿಡಬೇಕು." (ಕೃತಿಶ್ರೇಣಿ, ೪:೬೩)

## ಪರಸ್ಪರ ವಿನಿಮಯ

ಸ್ವಾಮೀಜಿ ಮುಂದೆ ೧೮೯೭ರಲ್ಲಿ ಕಲ್ಕತ್ತೆಯಲ್ಲಿ ಮಿರರ್ ಪತ್ರಿಕೆಯ ಸಂಪಾದಕ ನರೇಂದ್ರನಾಥ ಸೇನ್‌ರಿಗೆ ವಿವರಿಸುತ್ತಾರೆ:

"ನಮ್ಮ ದೇಶದಲ್ಲಿ ಇರುವುದು ಇದೊಂದು ವೇದಾಂತ ಧರ್ಮ ಮಾತ್ರ; ಪಾಶ್ಚಾತ್ಯ ನಾಗರಿಕತೆಯೊಡನೆ ಹೋಲಿಸಿ ನೋಡಿದರೆ ನಮಗೆ ಮತ್ತೇನೂ ಇಲ್ಲವೇ ಇಲ್ಲವೆಂದು ಹೇಳಬಹುದು. ಆದರೆ ಸಕಲ ಮತಗಳ ಮತ್ತು ಸಕಲ ಪಂಥಗಳ ಜನರಿಗೂ ಧರ್ಮಲಾಭದಲ್ಲಿ ಸಮಾನ ಅಧಿಕಾರವನ್ನು ಕೊಡುವ ಈ ಸಾರ್ವಭೌಮಿಕ ವೇದಾಂತವಿದೆಯಲ್ಲ, ಇದರ ಪ್ರಚಾರದಿಂದ ಪಾಶ್ಚಾತ್ಯ ನಾಗರಿಕ ಜಗತ್ತಿಗೆ, ಭರತಖಂಡದಲ್ಲಿ ಒಂದಾನೊಂದು ಕಾಲದಲ್ಲಿ ಎಂಥ ಆಶ್ಚರ್ಯಕರವಾದ ಧರ್ಮಭಾವದ ಸ್ಫೂರ್ತಿ ಉಂಟಾಗಿತ್ತು ಮತ್ತು ಈಗಲೂ ಇದೆ ಎಂಬುದು ಗೊತ್ತಾಗುತ್ತದೆ. ಈ ಮತದ ಪ್ರಚಾರದಿಂದ ಪಾಶ್ಚಾತ್ಯ ಜನರಿಗೆ ನಮ್ಮ ವಿಷಯದಲ್ಲಿ ಗೌರವವೂ ಸಹಾನುಭೂತಿಯೂ ಉಂಟಾದರೆ ಒಂದು ಕಡೆ ನಾವು ಅವರಿಂದ ಐಹಿಕ ಜೀವನಕ್ಕೆ ಬೇಕಾದ ವಿಜ್ಞಾನ ಶಾಸ್ತ್ರಾದಿಗಳನ್ನು ಕಲಿತುಕೊಂಡು ಜೀವನ ಸಂಗ್ರಾಮದಲ್ಲಿ ಹೆಚ್ಚು ಚುರುಕಿನಿಂದ ಕೆಲಸ ಮಾಡುವೆವು. ಮತ್ತೊಂದು ಕಡೆ ಅವರು ನಮ್ಮಿಂದ ವೇದಾಂತ ಮತವನ್ನು ಕಲಿತು ಪಾರಮಾರ್ಥಿಕ ಕಲ್ಯಾಣವನ್ನು ಪಡೆಯುವರು."

ಹೀಗೆ ಸ್ವಾಮೀಜಿ ಸಮಸ್ತ ಜಗತ್ತಿನ ಕಲ್ಯಾಣ ಸಾಧನೆಯನ್ನೇ ತಮ್ಮ ಉದ್ದೇಶವನ್ನಾಗಿ ಹೊಂದಿದ್ದರು. ಮದರಾಸಿನಲ್ಲಿ "ನನ್ನ ಸಮರನೀತಿ" ಎಂಬ ಭಾಷಣದಲ್ಲಿ ಅವರು ಹೇಳಿದ್ದಾರೆ: "ಈ ದಾನಶೀಲ ದೇಶದಲ್ಲಿ ಅಧ್ಯಾತ್ಮಜ್ಞಾನದಾನವೆಂಬ ಮೊದಲನೆಯ ಶಕ್ತಿಯನ್ನು ತೆಗೆದುಕೊಳ್ಳೋಣ. ಇದು ಭರತಖಂಡದಲ್ಲಿ ಮಾತ್ರ ಕೊನೆಗಾಣಕೂಡದು. ಇದು ಪ್ರಪಂಚದಲ್ಲೆಲ್ಲಾ ಹರಡಬೇಕು." ಇದು ಸ್ವಾಮಿ ವಿವೇಕಾನಂದರ ಜಾಗತೀಕರಣದ ರೀತಿ. ಇದರ ಹಿಂದೆ ಒಂದು ದೈವೀ ಯೋಜನೆ ಇದೆ ಎಂದು ಸ್ವಾಮೀಜಿ ನಂಬಿದ್ದರು. "ಸಮರನೀತಿ" ಭಾಷಣದಲ್ಲಿಯೇ ಮುಂದೆ ಅವರು ಹೇಳುತ್ತಾರೆ: "ನಾನು ಅಮೆರಿಕ ದೇಶಕ್ಕೆ ಹೋದುದು ನನ್ನಿಂದ ಅಲ್ಲ, ಅಥವಾ ನಿಮ್ಮಿಂದಲೂ ಅಲ್ಲ. ಭಾರತದ ಅದೃಷ್ಟವನ್ನು ಕಾಯುತ್ತಿರುವ ವಿಧಾತ ನನ್ನನ್ನು ಕಳುಹಿಸಿದನು."

> ವಿವೇಕಾನಂದರು ಆಧುನಿಕ ಚೀನಾದಲ್ಲಿ ಭಾರತದ ಅತ್ಯಂತ ಪ್ರಸಿದ್ಧ ತತ್ತ್ವಜ್ಞಾನಿಗಳಾಗಿಯೂ ಮತ್ತು ಸಾಮಾಜಿಕ ಧುರೀಣರಾಗಿಯೂ ಎದ್ದು ಕಾಣುತ್ತಾರೆ.
>
> — *ಹುವಾಂಗ್ ಕ್ಸಿನ್ ಚುವಾನ್ (ಚೀನಾದ ಮನೀಷಿ)*

## ವಿಶ್ವ ಪರ್ಯಟನೆ

೧೮೯೩ರಲ್ಲಿ ಅಮೆರಿಕಕ್ಕೆ ಹೋಗುವಾಗ ಸ್ವಾಮೀಜಿ ಪೂರ್ವ ದಿಕ್ಕಿನಲ್ಲಿ ಹೋದರು. ಆ ಕಾಲದಲ್ಲಿ ಹಡಗೇ ಗತಿ. ಕೊಲಂಬೋ, ಪೆನಾಂಗ್, ಸಿಂಗಪುರ, ಹಾಂಕಾಂಗ್, ಕ್ಯಾಂಟನ್‌ಗಳಲ್ಲಿ ಭಾರತದಲ್ಲಿ ಕಾಣುವುದಕ್ಕಿಂತ ಭಿನ್ನವಾದುದೇನೂ ಅವರಿಗೆ ಕಾಣಿಸಲಿಲ್ಲ. ಅನಂತರ ನಾಗಸಾಕಿ. ಇಲ್ಲಿ ಅದೆಂತಹ ವ್ಯತ್ಯಾಸ! ಜಗತ್ತಿನಲ್ಲೇ ಜಪಾನೀಯರು ಅತಿ ಶುಚಿವಂತರಾಗಿ ಕಂಗೊಳಿಸಿದರು. ಅವರು ಹೇಳುತ್ತಾರೆ : "ಜಪಾನೀಯರು ಆಧುನಿಕ ಕಾಲದ ಆವಶ್ಯಕತೆಗೆ ಸಂಪೂರ್ಣವಾಗಿ ಜಾಗ್ರತರಾಗಿರುವರು. ಈಗ ಅವರಿಗೆ ಒಂದು ಸುಸಜ್ಜಿತ ಸೈನ್ಯ ಇದೆ. ಅವರ ಒಬ್ಬ ಸೈನ್ಯಾಧಿಕಾರಿಯೇ ಕಂಡು ಹಿಡಿದ ಫಿರಂಗಿಗಳಿಂದ ಸಜ್ಜಾಗಿದೆ.... ಅವರು ತಮ್ಮ ನೌಕಾಪಡೆಯನ್ನೂ ಕ್ರಮೇಣ ಹೆಚ್ಚಿಸುತ್ತಲೇ ಇದ್ದಾರೆ.... ನಮ್ಮ ದೇಶದ ಹಲವು ಯುವಕರು ಜಪಾನಿಗೆ ಪ್ರತಿವರ್ಷವೂ ಭೇಟಿ ಕೊಡಬೇಕೆಂಬುದೇ ನನ್ನ ಆಸೆ."

ಅಳಸಿಂಗ ಮತ್ತು ಇತರ ಶಿಷ್ಯರಿಗೆ ಬರೆದ ತಮ್ಮ ಎರಡು ಪತ್ರಗಳಲ್ಲಿ ಚೀನ, ಜಪಾನ್ ಮುಂತಾದ ಪೂರ್ವದೇಶಗಳ ತಮ್ಮ ಪ್ರಯಾಣಕಾಲದ ಶ್ರೀಮಂತ ಅನುಭವಗಳನ್ನು ವಿವೇಕಾನಂದರು ಹಂಚಿಕೊಂಡಿದ್ದಾರೆ.

ಸ್ವಾಮಿ ವೇಕಾನಂದರ ಕೃತಿಶ್ರೇಣಿಯ ಮೊದಲನೇ ಸಂಪುಟದಲ್ಲಿ "ಪರಿವ್ರಾಜಕ" ಎಂಬ ಸುದೀರ್ಘ ಬಂಗಾಲೀ ಲೇಖನದಲ್ಲಿ ತಾವು ಎರಡನೆಯ ಸಲ ವಿದೇಶಯಾತ್ರೆಗೆ ಹೊರಟಾಗ ಆದ ಅನುಭವಗಳನ್ನು ವಿಸ್ತಾರವಾಗಿ ವರ್ಣಿಸಿದ್ದಾರೆ. ಈ ಲೇಖನದಲ್ಲಿ ಸಿಲೋನಿನಲ್ಲಿನ ಹಿಂದೂ-ಬೌದ್ಧ ಸಂಘರ್ಷಣೆಯನ್ನೂ ಇಟಲಿ ಅಬಿಸೀನಿಯಾಗಳ ವಿಚಿತ್ರ ಚರಿತ್ರೆಯನ್ನೂ, ಈಜಿಪ್ಟಿನ ದೇವತೆ ಐಸಿಸ್, ರಾಜ ಟಾಲೆಮಿ, ಅರೇಬಿಯದ ಮೆಕ್ಕಾ, ಮಹಮ್ಮದ್ ಪೈಗಂಬರರನ್ನೂ ನೆನಪಿಸಿಕೊಳ್ಳುತ್ತಾರೆ. ಸುಯೆಜ್ ಕಾಲುವೆ ಭಾರತಕ್ಕೆ ದಾರಿ ಮಾಡಿದುದರಿಂದ ಅದರ ಪ್ರಾಮುಖ್ಯವನ್ನೂ— ಯೂರೋಪಿನ ನಾಗರಿಕತೆ, ಐಶ್ವರ್ಯಗಳಿಗೆ ಭಾರತ ಮತ್ತು ಅಲ್ಲಿನ ಜನರೇ ಕಾರಣ ಎಂಬುದನ್ನೂ ವಿವರಿಸುತ್ತಾರೆ. ಕೆಲವು ತಿಂಗಳುಗಳ ನಂತರ, ಭಾರತಕ್ಕೆ ಹಿಂದಿರುಗುವ ಕಾಲದಲ್ಲಿ ಫ್ರಾನ್ಸ್,

ಮಧ್ಯ ಯೂರೋಪ್, ಪೂರ್ವ ಯೂರೋಪ್‌ಗಳ ನಿಕಟ ಪರಿಚಯವನ್ನೂ ಸ್ವಾಮೀಜಿ ಪಡೆದುಕೊಳ್ಳುತ್ತಾರೆ.

## ಅಮೆರಿಕ ಮತ್ತು ಇಂಗ್ಲೆಂಡ್

ಅಮೆರಿಕದಲ್ಲಿ ಜನ ತಮ್ಮ ವಿಚಾರಗಳನ್ನು ಅರ್ಥಮಾಡಿಕೊಂಡು ಅನುಷ್ಠಾನ ಮಾಡಲು ಅರ್ಹರೆಂದು ವಿವೇಕಾನಂದರಿಗೆ ಸಂತೋಷವಾಯಿತು. ಅವರು ಅಮೆರಿಕನ್ನರನ್ನು, ಅದರಲ್ಲಿಯೂ ಪರಿಶುದ್ಧ ಅಮೆರಿಕನ್ ಸುಶಿಕ್ಷಿತ ಮಹಿಳೆಯರನ್ನು ಮೆಚ್ಚಿದರು. ಎರಡು ವರ್ಷ ಅಮೆರಿಕದಲ್ಲಿ ಕೆಲಸ ಮಾಡಿದಮೇಲೆ ೧೮೯೫ರಲ್ಲಿ ಇಂಗ್ಲೆಂಡಿಗೆ ಹೋಗಿ ಕೆಲವು ತಿಂಗಳು ಅಲ್ಲಿದ್ದರು. ಪುನಃ ಅಮೆರಿಕಕ್ಕೆ ವಾಪಸುಹೋಗಿ ಮತ್ತೆ ಲಂಡನ್ನಿನ ಮೂಲಕ ೧೮೯೭ರಲ್ಲಿ ಭಾರತಕ್ಕೆ ಹಿಂದಿರುಗಿದರು. ಒಬ್ಬ ಅಮೆರಿಕನ್ ಸೋದರಿಗೆ ಬರೆದ ಪತ್ರದಲ್ಲಿ ಹೇಳುತ್ತಾರೆ:

"ನನ್ನ ಹೃದಯ ಇರುವುದು ಅಮೆರಿಕದಲ್ಲಿ. ನಾನು ಯಾಂಕಿಗಳ ನಾಡನ್ನು ಪ್ರೀತಿಸುತ್ತೇನೆ. ನನಗೆ ಹೊಸ ವಿಷಯಗಳನ್ನು ನೋಡಲು ಆಸೆ... ಬಾಳು ಅಲ್ಪಕಾಲದ್ದು, ಕಾಲವಾದರೋ ಓಡುತ್ತಿದೆ. ಒಬ್ಬನ ಆಲೋಚನೆಗಳು ಎಲ್ಲಿ ಉತ್ತಮ ರೀತಿಯಲ್ಲಿ ಕ್ರಿಯಾಶೀಲವಾಗುವುದೋ ಅದೇ ಅವನ ದೇಶವಾಗಬೇಕು. ಅವನ್ನು ಕಾರ್ಯಾಚರಣೆಗೆ ತರುವವರೇ ಅವನ ಜನರಾಗಬೇಕು." (ಕೃತಿಶ್ರೇಣಿ, ೬:೪೧೫) ಇನ್ನೊಂದು ಪತ್ರದಲ್ಲಿ ಶ್ರೀಮತಿ ಓಲಿ ಬುಲ್‌ಗೆ ಬರೆಯುತ್ತಾರೆ (ಲಂಡನ್ ಜೂನ್ ೫, ೧೮೯೬) ".....ಕೇವಲ ಅಮೆರಿಕದಲ್ಲಿ ಮಾತ್ರ, ಅಲ್ಲಿಯ ವಾತಾವರಣದಲ್ಲಿಯೇ, ಯಾರಲ್ಲಿ ಏನು ಉತ್ತಮ ಯೋಗ್ಯತೆ ಇದೆಯೋ ಅದೆಲ್ಲ ಹೊರ ಬರುವುದು.."

ಆದರೆ ಇಂಗ್ಲೆಂಡಿನ ಕನ್ಸರ್ವೇಟಿವ್ ಜನರೂ ತಮ್ಮ ಭಾವನೆಗಳಿಗೆ ಒಳ್ಳೆಯ ಪ್ರತಿಕ್ರಿಯೆ ತೋರಿಸಿದುದು ಸ್ವಾಮಿಗಳಿಗೆ ಇಷ್ಟವಾಯಿತು. ಆಶ್ಚರ್ಯವೂ ಆಯಿತು. ತಮ್ಮನ್ನು ಮತ್ತು ತಮ್ಮ ಬೋಧನೆಗಳನ್ನು ಹೀಗೆ ಸ್ವೀಕರಿಸಿದುದರಿಂದ ಸ್ವಾಮಿ ವಿವೇಕಾನಂದರು ಇಂಗ್ಲಿಷ್ ಗಂಡಸರು ಮತ್ತು ಹೆಂಗಸರ ವಿಷಯದಲ್ಲಿನ ಭಾವನೆಗಳನ್ನು ಸಂಪೂರ್ಣವಾಗಿ ಬದಲಿಸಿಕೊಂಡರು. ಅಮೆರಿಕದಲ್ಲಿ ಜನರು ಹೊಸ ಭಾವನೆಗಳನ್ನು ಎತ್ತಿಕೊಳ್ಳುವುದರಲ್ಲಿ ಅತಿ ಉತ್ಸಾಹಿಗಳೂ ಪ್ರತಿಕ್ರಿಯಾಶೀಲರೂ ಆಗಿರುವುದನ್ನು ಕಂಡ ವಿವೇಕಾನಂದರು ಇಂಗ್ಲೆಂಡಿನಲ್ಲಿ ತಮ್ಮ ಶ್ರೋತೃಗಳು ಇತರರ ವಿಚಾರಗಳನ್ನು ಸ್ವೀಕರಿಸುವುದರಲ್ಲಿ ನಿಧಾನಿಗಳಾದರೂ ಒಬ್ಬ ಬೋಧಕನ ಭಾವನೆಗಳ ಮೌಲ್ಯವನ್ನು ಅರಿತುಕೊಂಡರೆಂದರೆ ಅನಂತರ ಅವನ್ನು ಸಂಪೂರ್ಣವಾಗಿ ಸ್ವೀಕರಿಸಿ ಎಂದಿಗೂ ಅವನ್ನು ಬಿಟ್ಟುಕೊಡದ ಅವರ ದೃಢತೆಯನ್ನು ಗುರುತಿಸಿದರು.

## ಕ್ಯಾಲಿಫೋರ್ನಿಯದಲ್ಲಿ ಜಾಗತೀಕರಣ

ಪ್ರಪಂಚದ ವಿವಿಧ ಜನಾಂಗಗಳನ್ನು ಕಂಡು ಅವರ ಸಂಸ್ಕೃತಿಯ ಪರಿಚಯ ಪಡೆದಮೇಲೆ ಸ್ವಾಮೀಜಿ ಅಮೆರಿಕ-ಇಂಗ್ಲೆಂಡ್ ಜನರೇ ವೇದಾಂತ ಶಿಕ್ಷಣ ಪಡೆಯಲು ಅರ್ಹ ಅಧಿಕಾರಿಗಳೆಂದು ನಿಶ್ಚಯಿಸಿದರು. ಅಮೆರಿಕದ ಮೊದಲ ಸುತ್ತಿನ ಪ್ರವಾಸದಲ್ಲಿ ೧೮೯೩ರಿಂದ ೧೮೯೬ರವರೆಗೆ ಮೂರು ವರ್ಷ ಸ್ವಾಮೀಜಿ ಅಮೆರಿಕ ಇಂಗ್ಲೆಂಡುಗಳಲ್ಲಿ ತಮ್ಮ ವೇದಾಂತಪ್ರಚಾರದ ಕಾರ್ಯಾರಂಭ ಮಾಡಿದರು.ಯೂರೋಪಿನ ಬೌದ್ಧಿಕ ಜನನಾಯಕರ ಪರಿಚಯ ಪಡೆದರು. ಆದರೆ ಅವರು ವೇದಾಂತವನ್ನು ಹೆಚ್ಚು ಪ್ರಭಾವಕಾರಿಯಾಗಿ ಪ್ರಸಾರ ಮಾಡಿದುದು ತಮ್ಮ ಎರಡನೆಯ ಪಾಶ್ಚಾತ್ಯ ಪ್ರವಾಸದಲ್ಲಿ. ಈ ಸಲ ಅವರು ಅಮೆರಿಕದ ಕ್ಯಾಲಿಫೋರ್ನಿಯದಲ್ಲಿ ತಮ್ಮ ಪ್ರಚಾರಕಾರ್ಯವನ್ನು ಕೈಗೊಂಡರು. ಮೊದಲನೆಯ ಪ್ರವಾಸದಲ್ಲಿ ಚಿಕಾಗೋ, ಡೆಟ್ರಾಯ್ಟ್, ನ್ಯೂಯಾರ್ಕ್ ಪರಿಸರದಲ್ಲಿದ್ದರು. ಅಮೆರಿಕದ ವಾಣಿಜ್ಯ, ಕೈಗಾರಿಕೆ, ಆರ್ಥಿಕ ಕೇಂದ್ರಗಳಿರುವುದು ಇಲ್ಲಿಯೇ. ೧೮೯೯ರ ಕೊನೆಯ ಭಾಗದಲ್ಲಿ ಅವರು ಮೊದಲ ಬಾರಿಗೆ ಕ್ಯಾಲಿಫೋರ್ನಿಯದಲ್ಲಿ ಪದಾರ್ಪಣ ಮಾಡಿದರು. ಅಮೆರಿಕದಲ್ಲಿ ಪ್ರಗತಿಪರ ವಿಚಾರಗಳೆಲ್ಲ ಉಗಮಿಸಿದುದು ಕ್ಯಾಲಿಫೋರ್ನಿಯಾದಲ್ಲಿ. ಈ ರಾಜ್ಯದಲ್ಲೇ ಅಮೆರಿಕದ ಕಲೆ, ಬೌದ್ಧಿಕ ಕೇಂದ್ರಗಳು ಇರುವುದು. ಮುಂದೆ ಹಿಪ್ಪಿ ಕ್ರಾಂತಿ ಹುಟ್ಟಿದುದು ಇಲ್ಲಿಯೇ.

ಸ್ವಾಮೀಜಿ ಮೊದಲು ಲಾಸ್ ಏಂಜಲೀಸ್‌ಗೆ ಬಂದರು. ಅಲ್ಲಿ ತಮಗೆ, ತಮ್ಮ ಹೊಸ ಭಾವನೆಗಳಿಗೆ ದೊರೆತ ಉತ್ಸಾಹಭರಿತ ಸ್ವಾಗತ ಅವರಲ್ಲಿ ಸಂಭ್ರಮ ತಂದಿತು. ಅವರು ಮುಕ್ತವಾಗಿ ಹಿಂದೂ ಮನಶ್ಶಾಸ್ತ್ರ, ಭಾರತೀಯ ವಿಜ್ಞಾನ, ಕ್ರಿಸ್ತನ ನಿಜವಾದ ಸಂದೇಶ, ಮೊದಲಾದ ವಿಷಯಗಳ ಮೇಲೆ ಮಾತನಾಡಿದರು. ಮೂವರು ಮೀಡ್ ಸಹೋದರಿಯರು ಮತ್ತು ಇತರ ಅನೇಕರು ಸ್ವಾಮಿಗಳ ಶಿಷ್ಯರಾಗಿ ವೇದಾಂತ ಪ್ರಚಾರ ಕಾರ್ಯದಲ್ಲಿ ಅವರೊಡನೆ ಶ್ರಮಿಸಿದರು. ೧೯೦೦ರ ಮೊದಲ ಭಾಗದಲ್ಲಿ ಸ್ವಾಮೀಜಿ ಸ್ಯಾನ್ ಫ್ರಾನ್ಸಿಸ್ಕೋ ಮತ್ತು ಅದರ ಕೊಲ್ಲಿಯ ಪ್ರದೇಶದ ನಗರಗಳಲ್ಲಿ ಭಾಷಣ ಮಾಡಿ ಸಹಸ್ರ ಸಹಸ್ರ ಜನರನ್ನು ಆಕರ್ಷಿಸಿದರು. ಮೊದಲು ಓಕ್‌ಲೆಂಡ್ ನಗರದಲ್ಲಿ ಮಾತನಾಡಿದರು. ಇಲ್ಲಿಯೇ ಥಾಮಸ್ ಅಲೆನ್ ಎಂಬಾತ ಹೇಳಿದ: "ನಾನು ಈಗ ದೇವರ ವಾಣಿಯನ್ನು ಕೇಳಿದೆ, ಆತ ಮಾನವನಲ್ಲ!"

ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಅವರು ಮಾಡಿದ ಮೊದಲ ಭಾಷಣ "ಸಾರ್ವತ್ರಿಕ ಧರ್ಮದ ಪರಿಕಲ್ಪನೆ." ಇಲ್ಲಿಯೇ ಅವರು "ಕ್ರಿಸ್ತನ ಸಂದೇಶ" "ಬುದ್ಧನ ಸಂದೇಶ" "ಮಹಮ್ಮದ್" "ಕೃಷ್ಣ ಮತ್ತು ಅವನ ಸಂದೇಶ" "ವೇದಾಂತ ಭವಿಷ್ಯದ ಧರ್ಮವೇ?" ಎಂಬ ವಿಷಯಗಳ ಮೇಲೆ ಮಾತನಾಡಿದರು. ಜಾಗತೀಕರಣಕ್ಕೆ ಬಲವಾದ ಬುನಾದಿಯನ್ನು ನಿರ್ಮಿಸಿದರು. ಬಹಿರಂಗ ಭಾಷಣಗಳಲ್ಲದೆ ಸಣ್ಣ ಸಣ್ಣ ತರಗತಿಗಳನ್ನು ತಮ್ಮ ನಿವಾಸದಲ್ಲಿ ನಡೆಸಿ ವಿಚಾರಪ್ರಚಾರ ಮಾಡಿದರು. ದಿನಕ್ಕೆ ಎರಡು ಕ್ಲಾಸುಗಳನ್ನು ನಡೆಸುತ್ತಿದ್ದುದೂ ಉಂಟು. ಅವರು ಶ್ರೋತೃಗಳಿಗೆ ವಿಸ್ಮಯವಾಗುವಂತೆ ಹೇಳುತ್ತಾರೆ:

"ಈ ದೇಶದಲ್ಲಿ (ಅಮೆರಿಕ) ರಾಜನು ನಿಮ್ಮೆಲ್ಲರನ್ನೂ ಪ್ರವೇಶಿಸಿರುವನು. ಈ ದೇಶದಲ್ಲಿ ನೀವೆಲ್ಲರೂ ರಾಜರು.

ಹೀಗೆಯೇ ಇದೆ ವೇದಾಂತ ಧರ್ಮ. ನೀವೆಲ್ಲ ದೇವರುಗಳು. ಒಬ್ಬ ದೇವರು ಸಾಲದು. ನೀವೆಲ್ಲ ದೇವರು ಎಂದು ಹೇಳುತ್ತದೆ ವೇದಾಂತ.... ಯಾವ ಗ್ರಂಥವೂ ಇಲ್ಲ, ವೈಯಕ್ತಿಕ ದೇವರೂ ಇಲ್ಲ. ಇವೆಲ್ಲ ಹೋಗಬೇಕು. ಇಂದ್ರಿಯಗಳು ಹೋಗಬೇಕು. ನಾವು ಇಂದ್ರಿಯಗಳಿಗೆ ಬದ್ಧರಾಗಿರಬಾರದು."[*The Life of Swami Vivekananda*, vol.2, pp512-13]

ಹೀಗೆ ಸ್ವಾಮೀಜಿ ಅಮೆರಿಕ, ಇಂಗ್ಲೆಂಡುಗಳಲ್ಲಿ ತಮ್ಮ ಭಾವನೆಗಳ ಪ್ರಚಾರ ಮಾಡಿ ಜಾಗತೀಕರಣವನ್ನು ಆರಂಭಿಸಿದರು. ಭಾರತದ ಭಾಷಣಗಳೂ ಸಹ (ಕೊಲಂಬೋ ಇಂದ ಆಲ್ಮೋರಕ್ಕೆ) ಈ ಕಾರ್ಯವನ್ನೇ ಇನ್ನೊಂದು ನಿಟ್ಟಿನಿಂದ ಮಾಡುತ್ತವೆ. ಇಲ್ಲಿ ಭಾರತದ ಅಭಿವೃದ್ಧಿಯೇ ಅವರ ಗುರಿ. ಸ್ವಾಮಿ ವಿವೇಕಾನಂದರು ರಾಮಕೃಷ್ಣಸಂಘವನ್ನು ಸ್ಥಾಪಿಸಿದುದು ಮಾನವತೆಯ ಒಳಿತಿಗಾಗಿ, ಜಗತ್ತಿನ ಏಳಿಗೆಗಾಗಿ. ಇದು ಸ್ವಾಮಿ ವಿವೇಕಾನಂದರ ಜಾಗತೀಕರಣ. ರಾಮಕೃಷ್ಣ ಮಠ ಮತ್ತು ಮಿಷನ್ ತನ್ನ ನೂರಾರು ಕೇಂದ್ರಗಳ ಮೂಲಕ ವ್ಯಾಪಕವಾಗಿ ರಾಮಕೃಷ್ಣ-ವಿವೇಕಾನಂದ-ವೇದಾಂತದ ಪ್ರಚಾರವನ್ನು ಶ್ರದ್ಧೆಯಿಂದ ಮಾಡುತ್ತಿರುವುದು. ತನ್ನ ವಿಪುಲ ಸಾಹಿತ್ಯರಾಶಿಯ ಮೂಲಕ ವಿಶ್ವವ್ಯಾಪಕ ಭಾವನೆಗಳ ಪ್ರಸಾರ ಮಾಡುತ್ತ ಜಾಗತೀಕರಣ ಪ್ರತಿಕ್ರಿಯೆಯನ್ನು ತ್ವರಿತಗೊಳಿಸುತ್ತಿದೆ.

"ಭಾರತವು ಬಾಹ್ಯ ಪ್ರಕೃತಿಯ ಮೇಲೆ ಜಯ ಸಾಧಿಸುವುದನ್ನು ಯೂರೋಪಿನಿಂದ ಕಲಿಯಬೇಕು. ಆಂತರಿಕ ಪ್ರಕೃತಿಯನ್ನು ಜಯಿಸುವ ಕಲೆಯನ್ನು ಯೂರೋಪ್ ಭಾರತದಿಂದ ಕಲಿಯಬೇಕು. ಆಗ ಭಾರತೀಯರೂ ಇರುವುದಿಲ್ಲ, ಯೂರೋಪಿಯನರೂ ಇರುವುದಿಲ್ಲ. ಆಗ ಬಾಹ್ಯಾಂತರ ಪ್ರಕೃತಿಗಳನ್ನು ಗೆದ್ದ ಆದರ್ಶ ಮಾನವಕೋಟಿಯೊಂದೇ ಉಳಿಯುತ್ತದೆ" (ಕೃ.ಶ್ರೀ.೭.೩೪೯). ಇದು ವಿವೇಕಾನಂದರ ಜಾಗತೀಕರಣದ ಪರಿಕಲ್ಪನೆಯಾಗಿತ್ತು. ಅವರು ಇನ್ನೊಂದು ಕಡೆ ಹೇಳುತ್ತಾರೆ, ಮಾನವಕೋಟಿ ಎಲ್ಲ ಮತೀಯ ಧರ್ಮಗಳನ್ನು ಮೀರಿಹೋಗಿ ಒಂದು ವಿಶ್ವಧರ್ಮವನ್ನು ಅನುಸರಿಸಬೇಕು ಎಂದು. "ಮಾನವಕೋಟಿಯನ್ನು ವೇದ, ಬೈಬಲ್ ಮತ್ತು ಕುರಾನ್‌ಗಳನ್ನು ಮೀರಿದ ಹಂತಕ್ಕೆ ತೆಗೆದುಕೊಂಡು ಹೋಗಬೇಕು" ಎನ್ನುತ್ತಾರೆ ಅವರು. ಹೀಗೆ ವ್ಯಕ್ತಿಯು ಧಾರ್ಮಿಕ, ರಾಷ್ಟ್ರೀಯ, ಜನಾಂಗೀಯ ಮುಂತಾದ ಎಲ್ಲ ಪರಿಧಿಗಳನ್ನೂ ಮೀರಿಹೋದಾಗಲೇ ಅವನು ವಿಶ್ವಕುಟುಂಬಿಯಾಗಲು ಸಾಧ್ಯ. ಇದೇ ನಿಜವಾದ ಜಾಗತೀಕರಣ. ಆಗ ಯಜುರ್ ವೇದವು ಹೇಳುವಂತೆ, ಯತ್ರ ವಿಶ್ವಂ ಭವತಿ ಏಕ ನೀಡಂ—"ಇಡೀ ವಿಶ್ವವೇ ಒಂದು ಮನೆಯಾಗುತ್ತದೆ." ಮಾನವ ಮನೋಭಾವದಲ್ಲೇ ಜಾಗತೀಕರಣವಾಗದೆ ವಾಣಿಜ್ಯ,ಆರ್ಥಿಕ ಮುಂತಾದ ಕ್ಷೇತ್ರಗಳಲ್ಲಿನ ಜಾಗತೀಕರಣ ಯಾವ ಸತ್ಫಲವನ್ನೂ ನೀಡಲಾರದು. ನಿಜವಾದ ಜಾಗತೀಕರಣಕ್ಕೆ ವಿವೇಕಾನಂದರ ಸಂದೇಶವು ನಮ್ಮನ್ನು ಎಚ್ಚರಿಸಲಿ ಎಂದು ಹಾರೈಸೋಣ.

## ಮಾಯೆಯ ಸ್ವರೂಪ

ಮನ್ಮಥ ಗಂಗೂಲಿ ಎಂಬ ಭಕ್ತನು ಒಮ್ಮೆ ಸ್ವಾಮಿ ವಿವೇಕಾನಂದರನ್ನು ಹೀಗೆ ಕೇಳುತ್ತಾನೆ : "ಸ್ವಾಮೀಜಿ, ಮಾಯೆಯ ಮೇಲಿನ ನಿಮ್ಮ ಉಪನ್ಯಾಸಗಳನ್ನು ಓದಿದೆ. ನನಗವು ಬಹಳ ಹಿಡಿಸಿದವು. ಆದರೆ ಸರಿಯಾಗಿ ಅರ್ಥವಾಗಲಿಲ್ಲ. ಮಾಯೆ ಎಂದರೇನು ಎಂದು ಸ್ವಲ್ಪ ವಿವರಿಸುವಿರಾ?" ಸ್ವಾಮೀಜಿ ಸ್ವಲ್ಪ ಹೊತ್ತು ಸುಮ್ಮನಿದ್ದರು. ಅನಂತರ, "ಬೇರೇನಾದರೂ ತಿಳಿಯುವುದಿದ್ದರೆ ಕೇಳು" ಎಂದರು. ಆಗ ಮನ್ಮಥ ಗಂಗೂಲಿ "ಇನ್ನೇನೂ ಕೇಳುವುದಿಲ್ಲ. ತಮ್ಮಂತಹ ಬ್ರಹ್ಮಜ್ಞ ಪುರುಷರು ಇದನ್ನು ವಿವರಿಸಿ ಹೇಳದಿದ್ದರೆ ಇದು ರಹಸ್ಯವಾಗಿಯೇ ಉಳಿಯುವುದು." ಎಂದನು. ಇದನ್ನು ಕೇಳಿ ಸ್ವಾಮೀಜಿ ಮಾಯೆಯ ಬಗ್ಗೆ ವ್ಯಾಖ್ಯಾನ ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ತನಗಾದ ಅನುಭವದ ಬಗ್ಗೆ ಮನ್ಮಥ ಗಂಗೂಲಿ ಹೀಗೆ ಬರೆಯುತ್ತಾನೆ: "ಅವರು ವೇಗವಾಗಿ ಹೇಳುತ್ತಿದ್ದರು. ನಾನು ಅವರ ಮಾತನ್ನೂ ತರ್ಕಸರಣಿಯನ್ನೂ ಅನುಸರಿಸಿದೆ. ಕೇಳುತ್ತಿದ್ದಂತೆಯೇ ಮನಸ್ಸು ಇಂದ್ರಿಯ ಸಂಪರ್ಕದಿಂದ ಬೇರೆಯಾಯಿತು. ನನ್ನ ಸುತ್ತಲೂ ಒಂದು ಸೂಕ್ಷ್ಮ ಜಗತ್ತು ಇರುವಂತೆ ಅನುಭವವಾಯಿತು. ನಾನು ಕಣ್ತೆರೆದು ನೋಡುತ್ತಿದ್ದಂತೆಯೇ ಮಠ ಮರ ಎಲ್ಲ ಕಂಪಿಸುತ್ತಿರುವಂತೆ ಕಂಡಿತು. ದೊಡ್ಡ ಬೆಂಕಿಯ ಮೇಲ್ಭಾಗದಲ್ಲಿ ನೋಡಿದರೆ ಒಂದು ಸ್ಪಂದನ ಕಾಣಿಸುವುದು. ಹಾಗೆಯೇ ನನ್ನ ಕಣ್ಮುಂದೆ ವಸ್ತುಗಳೆಲ್ಲ ಸ್ಪಂದಿಸುತ್ತಿದ್ದವು. ನನ್ನ ಅನುಭವದ ಪ್ರಜ್ಞೆ ನನಗಿದ್ದು 'ಇದೇನಿದು ನಾನು ನೋಡುತ್ತಿರುವುದು?' ಎಂದು ನನ್ನನ್ನು ನಾನೇ ಕೇಳಿದೆ. ನಾನು ಸುತ್ತಲೂ ನೋಡಿದೆ ಎಲ್ಲೆಲ್ಲಿಯೂ ಸ್ಪಂದನ, ಕ್ರಮೇಣ ಸ್ವಾಮೀಜಿಯವರೂ ಕಣ್ಮರೆಯಾದರು. ಆಗಲೂ ಅವರ ಧ್ವನಿ ಕೇಳಿಸುತ್ತಿತ್ತು. ಆದರೆ ಅರ್ಥವಾಗುತ್ತಿರಲಿಲ್ಲ. ಅನಂತರ ನನ್ನ ಮಿದುಳಿನಲ್ಲಿಯೂ ಸ್ಪಂದನದ ಅರಿವಾಯಿತು, ಅಲ್ಲಿ ಬರೀ ಶೂನ್ಯ. ಮತ್ತೆ ಸ್ವಾಮೀಜಿಯವರು ಕಾಣಿಸಿದರು, ಅವರ ಧ್ವನಿಯೂ ಕೇಳಿಸಿತು, ಮತ್ತು ಅರ್ಥವೂ ಆಗುತ್ತಿತ್ತು. ನನ್ನ ಅಹಂಕಾರದ ಪ್ರಜ್ಞೆಯಿತ್ತು. ಆದರೆ ಅದು ಮೊದಲಿನಂತೆ ಶ್ರಮಿಸುತ್ತಿರಲಿಲ್ಲ. ಏಕೆಂದರೆ ನನಗೆ ಮಾಯೆಯೆಂದರೆ ಏನೆಂಬುದು ತಿಳಿದಿದೆ ಅನಿಸಿತು."

ಸ್ಥಳದಾನ: ಲಾಲ್ ಟಿ ಸಾಧ್ವಾನಿ, ಬೆಂಗಳೂರು